ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಈ ವಿಚಾರದಲ್ಲಿ ಟೆಂಡರು ಕರೆಯಲಾಗಿದೆ.

ವಿಷಯ : ತುಮಕೂರು ಜಿಲ್ಲೆಯ ಕೊರಟಗೆರೆ ಬಸ್ ನಿಲ್ದಾಣವನ್ನು ಪ್ರಾರಂಭಿಸದಿರುವ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ ೬೭೩ (೧೦೦೪)

ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರ ಜಿಲ್ಲೆಯ ಕೊರಟಗೆರೆಯಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಾಣ ವಾಗಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ, ಈ ಬಸ್‌ಸ್ಟ್ಯಾಂಡ್ ನಿರ್ಮಾಣ ಕಾರ್ಯವನ್ನು ಎಂದು ಮುಕ್ತಾಯಗೊಳಿಸಲಾಯಿತು ?

ಇ) ನಿರ್ಮಾಣ ಕಾರ್ಯ ಮುಕ್ತಾಯಗೊಂಡು ಬಹಳ ದಿನಗಳಾದರೂ ಪ್ರಾರಂಭಿಸದಿರುವುದರಿಂದ ಅಲ್ಲಿನ ನೈರ್ಮಲ್ಯ ಕೆಡುತ್ತಿರುವುದು ನಿಜವಲ್ಲವೆ ?

ಈ) ಹಾಗಿದ್ದಲ್ಲಿ, ಸರ್ಕಾರ ಕೂಡಲೇ ಈ ಬಸ್ ನಿಲ್ದಾಣವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಅಜೀಜ್ ಸೇತ (ಸಾರಿಗೆ ಸಚಿವರು) :

ಅ) ಬಸ್ ಸ್ಟ್ಯಾಂಡ ಕೆಲಸಗಳು ಇನ್ನೂ ಮುಗಿದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ನಿಜ

ಈ) ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ :– ಗುಲ್ಬರ್ಗಾ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಅನಾಹುತ.

ಚುಕ್ಕೆ ರಹಿತ ಪ್ರಶ್ನೆ ೬೭೪ (೧೧೫೫)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಆಫ್ಜಲಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಸತತ ಭಾರಿ ಮಳೆಯಿಂದ ಕುಸಿದು ಹೋದ ಮನೆಗಳ (ಮನೆ) ಸಂಖ್ಯೆ ಎಷ್ಟು ? (ತಾಲ್ಲೂಕು ವಾರುಗಳಲ್ಲಿ ವಿವರ ನೀಡುವುದು)

ಆ) ಇಲ್ಲಿಯವರೆಗೆ ಹಾನಿಗೊಳಗಾದ ಎಷ್ಟು ಮನೆಗಳಿಗೆ ಪರಿಹಾರ ನೀಡಲಾಗಿದೆ?

ಇ) ಈ ಮಳೆಯಿಂದ ರೈತರ ಬೆಳೆ ನಾಶವಾಗಿದ್ದು, ನೊಂದ ರೈತರಿಗೆ ಸರಕಾರದಿಂದ ಏನು ಪರಿಹಾರ ಧನ ಸಹಾಯ ಮಾಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :-

ಅ) ೧೩, ೭೪೩

	ತಾಲೂಕಿನ ಹೆಸರು	ಸಂಖ್ಯೆ
೧)	ಗುಲ್ಬರ್ಗಾ	೧,೪೭೫
೨)	ಆಳಂದ	೨,೩೬೩
೩)	ಅಫಜಲಪುರ	೨,೪೭೩
೪)	ಜೇವರ್ಗಿ	೧,೪೭೫
೫)	ಯಾದಗಿರಿ	೧,೩೫೦
೬)	ಷಹಾಪುರ	೫೪೧
೭)	ಸುರಪುರ	೨೨೦
೮)	ಸೇಡಂ	೩೩೧
೯)	ಚಿತ್ತಾಪುರ	೭೨೪
೧೦)	ಚಿಂಚೋಳಿ	೭೨೬

ಆ) ೧೦, ೫೪೩

ಇ) ನೊಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪರ್ಯಾಯ ಬೆಳೆ ಬೆಳೆಯಲು ಅನುಕೂಲವಾಗುವಂತೆ ಬಿತ್ತನೆ ಬೀಜಗಳುಳ್ಳ ಚೀಲಗಳನ್ನು ಉಚಿತ ವಿತರಣೆಗಾಗಿ ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರಿಗೆ ರೂ. ೩.೦೦ ಲಕ್ಷಗಳನ್ನು ಸರ್ಕಾರವು ಬಿಡುಗಡೆ ಮಾಡಿದೆ.

ವಿಷಯ : ಅಫ್ಜಲ್‌ಪುರ ಕ್ಷೇತ್ರದ ಗಾಣಿಗಾಪುರ ಬಸ್ ನಿಲ್ದಾಣ ಕಟ್ಟಡದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೭೫ (೧೧೩೪)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ (ಅಫ್ಜಲ್‌ಪುರ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫ್ಜಲ್‌ಪುರ ಕ್ಷೇತ್ರದ ಸ್ಟೇಷನ್ ಗಾಣಿಗಾಪುರ ಬಸ್ ಸ್ಟ್ಯಾಂಡ್ ಕಟ್ಟಡ ಯಾವ ಯಾವ ಇಸವಿಯಲ್ಲಿ ಮಂಜೂರು ಮಾಡಲಾಗಿದೆ ?

ಆ) ಇದು ಇಲ್ಲಿಯವರೆಗೆ ಪ್ರಾರಂಭವಾಗದೆ ಇರಲು ಕಾರಣವೇನು ?

ಇ) ಅಫ್ಜಲ್‌ಪುರ ಮತ್ತು ದೇವಲಗಾಣಿಗಾಪುರ ಬಸ್‌ಸ್ಟ್ಯಾಂಡ್ ಕಟ್ಟಡ ಹಾಗೂ ಶೌಚಾಲಯ ಕಟ್ಟಡವನ್ನು ದುರಸ್ಥಿಗೊಳಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ೧೯೯೮-೯೧ನೇ ಸಾಲಿನಲ್ಲಿ ಅಫ್ಜಲ್‌ಪುರ ಕ್ಷೇತ್ರದ ಟಾಡಾಪುರ ಮತ್ತು ಕರಜಗಿ ಈ ಗ್ರಾಮಗಳಲ್ಲಿ ಸರ್ಕಾರ ಹೊಸ ಬಸ್‌ಸ್ಟ್ಯಾಂಡಿನ ಕಟ್ಟಡಕ್ಕೆ ಮಂಜೂರು ನೀಡುವುದೇ ?